

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 13 ಸಂಚಿಕೆ : 1 ಪುಟ 8 ಸುತ್ತೂರು ಶ್ರೀಕ್ಷೇತ್ರ ಶುಕ್ರವಾರ, 1 ಫೆಬ್ರವರಿ 2019


ವಸ್ತುಪ್ರದರ್ಶನ | ಕೃಷಿ ಮೇಳ | ಸಾಮೂಹಿಕ ವಿವಾಹ | ಭಜನಾ ಮೇಳ | ರಥೋತ್ಸವ

# ಇಂದಿನಿಂದ ಸುತ್ತೂರು ಜಾತ್ರೆಯ ಸಂಭ್ರಮ

**ಸುತ್ತೂರು ಶ್ರೀಕ್ಷೇತ್ರ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಫೆಬ್ರವರಿ 1 ರಿಂದ 6 ರವರೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.




**ಗುರುವಾರ ಮುಂಜಾನೆ ಜಾತ್ರಾ ಮಹೋತ್ಸವದ ಮಹಾದಾಸೋಹದ ಕೊಪ್ಪರಿಗೆಗೆ ಪಡಿ ಪದಾರ್ಥಗಳನ್ನು ಸಮರ್ಪಿಸುತ್ತಿರುವ ಜಗದ್ಗುರುಗಳವರು. ವಾಟಾಳು ಶ್ರೀಗಳು, ಕಿರಿಯ ಶ್ರೀಗಳು ಹಾಗೂ ಮೊದಲಾದವರಿದ್ದಾರೆ**

ಆರು ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವದಲ್ಲಿ ಫೆಬ್ರವರಿ 3 ರಂದು ರಥೋತ್ಸವ, 5 ರಂದು ತೆಪ್ಪೋತ್ಸವ ಹಾಗೂ ಕೊಂಡೋತ್ಸವ, ಹಾಲ್ಹರವಿ ಉತ್ಸವ, ಲಕ್ಷದೀಪೋತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ವೈವಿಧ್ಯಮಯ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾಚಟುವಟಿಕೆಗಳು ಜರುಗಲಿವೆ.

**ಭಜನಾ ಮೇಳ:** ಈ ವರ್ಷ 27ನೇ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ನಡೆಯಲಿದ್ದು ಎಲ್ಲ ಜಿಲ್ಲೆಗಳ ಹಾಗೂ ಹೊರ ರಾಜ್ಯದಿಂದ ಪುರುಷ, ಮಹಿಳಾ, ಮಕ್ಕಳ ಭಜನಾ ತಂಡಗಳು ಮತ್ತು ಏಕನಾದ ಸೇರಿದಂತೆ ಸುಮಾರು 800 ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಒಟ್ಟು ಏಳು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಬಹುಮಾನಗಳನ್ನು ನೀಡಲಾಗುವುದು.

**ವಸ್ತುಪ್ರದರ್ಶನ:** ಜಾತ್ರೆಯ ಪ್ರಮುಖ ಆಕರ್ಷಣೆಯಾದ ವಸ್ತು ಪ್ರದರ್ಶನದಲ್ಲಿ ಕರಕುಶಲ, ಕೈಮಗ್ಗ, ಗೃಹೋಪಯೋಗಿ ಪದಾರ್ಥಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಇರುತ್ತದೆ. ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೈಗಾರಿಕಾ ಸಂಸ್ಥೆಗಳು, **2ನೇ ಪುಟಕ್ಕೆ**




## “ಸಮಾಜದ ಎರಡು ಕಣ್ಣುಗಳು”

ಸಮಾಜವನ್ನು ಕಟ್ಟಿ ಬೆಳೆಸುವಲ್ಲಿ ತಮ್ಮ ಇಡೀ ಜೀವಮಾನವನ್ನೇ ಸಮರ್ಪಿಸಿಕೊಂಡಿರುವ ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಹಾಗೂ ಸಿದ್ಧಗಂಗೆ ಶ್ರೀಕ್ಷೇತ್ರದ ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರುಗಳು ಸಮಾಜದ ಎರಡು ಕಣ್ಣುಗಳು ಇದ್ದಂತೆ ಎಂದು ಮೈಸೂರಿನ ಶ್ರೀ ಪಂಚಗವಿ ಮಠದ ಪೀಠಾಧ್ಯಕ್ಷರು ಹಾಗೂ ಬಹುಭಾಷಾ ವಿಶಾರದರಾಗಿದ್ದ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರು ಬಣ್ಣಿಸಿರುವುದಾಗಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸ್ಮರಿಸಿಕೊಳ್ಳುವುದರೊಂದಿಗೆ ಇಬ್ಬರು ಸಿದ್ಧಿಪುರುಷರ ಪ್ರಭೆಯನ್ನು ಸಮುದಾಯದೊಂದಿಗೆ ಹಂಚಿಕೊಂಡರು.

## ಸಿದ್ಧಗಂಗಾ ಶ್ರೀಗಳು ನುಡಿದಂತೆ...

ಸುತ್ತೂರು ಶ್ರೀಮಠವು ಅನೇಕ ಮಂದಿ ಶಿವಯೋಗಿಗಳಿಗೆ, ಸಿದ್ಧ ಪುರುಷರಿಗೆ, ಜನ್ಮವನ್ನು ಕೊಟ್ಟಿರತಕ್ಕಂಥ ಒಂದು ಪುಣ್ಯಕ್ಷೇತ್ರವಾಗಿದೆ. ಆ ಶಕ್ತಿ ನಾಡಿಗೆಲ್ಲಾ ಪಸರಿಸಿ ಪುನೀತರನ್ನಾಗಿ ಮಾಡಿರತಕ್ಕಂಥ ಕ್ಷೇತ್ರ. ಆ ಪವಿತ್ರ ಕ್ಷೇತ್ರದಲ್ಲಿ ಅವತರಿಸಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರು ಪುಣ್ಯಮೂರ್ತಿಗಳು. ಇವರ ಪ್ರಭಾವ ಜನತೆಯ ಮೇಲೆ ಆಗಿ, ಅವರ ಅಂತಃಕರಣ ಬೆಳಗಿ, ಹೃದಯ ಪರಿವರ್ತನೆಯಾಗಿ, ನಿಜವಾದ ಭಾರತತ್ವದತ್ತ ಗಮನ ಹರಿಯಬೇಕಾಗಿದೆ.

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನದ ಸುತ್ತೂರು ಶ್ರೀಮಠವು ಧರ್ಮಪೀಠವಾಗಿತ್ತು. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಅದನ್ನು ಮಹಾವಿದ್ಯಾಪೀಠವನ್ನಾಗಿ ಮಾಡಿದರು. ಇವರು ಅನೇಕ ವಿದ್ಯಾಸಂಸ್ಥೆಗಳನ್ನು ಕಟ್ಟಿ, **7ನೇ ಪುಟಕ್ಕೆ**

## ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಗದ್ದುಗೆಯ ಮಹಾದ್ವಾರದ ಒಂದು ನೋಟ



# ಇಂದಿನಿಂದ ಸುತ್ತೂರು ಜಾತ್ರೆಯ ಸಂಭ್ರಮ




(1ನೇ ಪುಟದಿಂದ)

ಉದ್ಯಮಿಗಳು ಹಾಗೂ ಮಹಿಳಾ ಉದ್ಯಮಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಜೆಎಸ್‌ಎಸ್ ಪ್ರೌಢಶಾಲೆಗಳ ವಿದ್ಯಾರ್ಥಿಗಳು ತಯಾರಿಸಿರುವ 200 ಕ್ಕೂ ಹೆಚ್ಚು ಶಿಕ್ಷಣ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳು, ವೈದ್ಯಕೀಯ ಹಾಗೂ ತಾಂತ್ರಿಕ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ.

**ಕೃಷಿ ಮೇಳ:** ಕೃಷಿ ಹಾಗೂ ಕೃಷಿ ಸಂಬಂಧಿ ತಾಂತ್ರಿಕತೆಯ ಬಗ್ಗೆ ರೈತರಿಗೆ ಮಾಹಿತಿ ನೀಡಲು ಈ ಮೇಳವನ್ನು ಆಯೋಜಿಸಲಾಗಿದೆ. ಸಮಗ್ರ ಬೆಳೆ ನಿರ್ವಹಣೆ, ಪಶು ಸಂಗೋಪನೆ ಮುಂತಾದ ವಿಷಯಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗುವುದು. ಸಿರಿಧಾನ್ಯಗಳನ್ನು ಬೆಳೆಯುವ ರೈತರು ಹಾಗೂ ತಜ್ಞರೊಂದಿಗೆ ಸಮಾಲೋಚನೆಗೆ ಅವಕಾಶ ಕಲ್ಪಿಸಲಾಗಿದೆ. ಸಿರಿಧಾನ್ಯಗಳ ಆಹಾರ ತಯಾರಿಕೆ ಸ್ಪರ್ಧೆಯನ್ನು ಏರ್ಪಡಿಸಿದೆ. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಿರಿಧಾನ್ಯಗಳ ಮಾರಾಟದ ವ್ಯವಸ್ಥೆಯನ್ನೂ ಹಾಗೂ ಅತಿ ಹೆಚ್ಚು ಸಸಾರಜನಕ, ಶರ್ಕರ ಪಿಷ್ಠ ಹಾಗೂ ನಾರು ಹೊಂದಿರುವ ವಿದೇಶಿ ಸೂಪರ್ ಫುಡ್ ಬೆಳೆಗಳಾದ ಟಿಫ್, ಚಿಯಾ ಹಾಗೂ ಕ್ಲಿನೋವಗಳ ಪ್ರದರ್ಶನ ಕಲ್ಪಿಸಲಾಗಿದೆ.

**ಸ್ಥಳದಲ್ಲೇ ಚಿತ್ರ ರಚಿಸುವ ರಾಜ್ಯಮಟ್ಟದ ಸ್ಪರ್ಧೆ:** ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ರಾಜ್ಯಮಟ್ಟದ ಸ್ಪರ್ಧೆಯನ್ನು 3.2.2019 ರಂದು ಏರ್ಪಡಿಸಲಾಗಿದೆ.

**ಚಿತ್ರಸಂತೆ:** ರಾಜ್ಯದ ಕಲಾವಿದರ ಜೊತೆಗೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದ ನಾಲ್ಕು ರಾಜ್ಯಗಳ ಕಲಾವಿದರುಗಳಿಂದ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಮಾಡುವ ಸಲುವಾಗಿ ಚಿತ್ರಸಂತೆಯನ್ನು ಏರ್ಪಡಿಸಲಾಗಿದೆ.


**ಸಾಮೂಹಿಕ ವಿವಾಹ:** ಪ್ರತಿ ವರ್ಷದಂತೆ ಈ ವರ್ಷವೂ 2.2.2019 ರಂದು ಉಚಿತ ಸಾಮೂಹಿಕ ವಿವಾಹ ಜರುಗಲಿದೆ. ಜಾತಿ–ಮತ ಭೇದಭಾವವಿಲ್ಲದೆ ಎಲ್ಲರಿಗೂ ಮುಕ್ತ ಅವಕಾಶವಿರುತ್ತದೆ. ಈ ಸರಳ ಸಾಮೂಹಿಕ ವಿವಾಹದಲ್ಲಿ ಅಂತರ್ಜಾತಿ ಹಾಗೂ ಅಂಗವಿಕಲ ಜೋಡಿಗಳು ಸಹ ವಿವಾಹವಾಗಲಿದ್ದಾರೆ. ವಧುವಿಗೆ ಮಾಂಗಲ್ಯ, ಸೀರೆ, ಕಾಲುಂಗುರಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ನೀಡಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಈವರೆಗೆ 2,750ಕ್ಕೂ ಹೆಚ್ಚು ಮಂದಿ ವಿವಾಹಿತರಾಗಿದ್ದಾರೆ. ಈಗಾಗಲೇ ನೋಂದಣಿ ಕಾರ್ಯ ಆರಂಭವಾಗಿದ್ದು, ಕಳೆದ ವರ್ಷಕ್ಕಿಂತಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.



**ಕುಸ್ತಿ ಪಂದ್ಯಾವಳಿ:** 5.2.2019 ರಂದು 39ನೇ ರಾಷ್ಟ್ರಮಟ್ಟದ ನಾಡ ಕುಸ್ತಿ ಪಂದ್ಯಗಳು ನಡೆಯಲಿವೆ. ಈ ಬಾರಿ ಎರಡೂ ಮಾರ್‌ಪೀಟ್ ಕುಸ್ತಿ ನಡೆಯುತ್ತವೆ. ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಗೆ ಸುತ್ತೂರು ಕೇಸರಿ ಪ್ರಶಸ್ತಿ ಹಾಗೂ ಸ್ಥಳೀಯ ಉತ್ತಮ ಕುಸ್ತಿ ಸ್ಪರ್ಧೆಗೆ ಸುತ್ತೂರು ಕುಮಾರ ಪ್ರಶಸ್ತಿ ನೀಡಲಾಗುವುದು.

**ದೇಸಿ ಆಟಗಳು:** ಜೆಎಸ್‌ಎಸ್ ಸಂಸ್ಥೆಯು ವಿದ್ಯಾರ್ಥಿಗಳಿಗಾಗಿ ವಿವಿಧ ದೇಸಿ ಆಟಗಳ ಸ್ಪರ್ಧೆಗಳು ನಡೆಯಲಿವೆ.

**ಸೋಬಾನೆ ಪದ, ರಂಗೋಲಿ, ಗಾಳಿಪಟ ಸ್ಪರ್ಧೆಗಳು:** ಗ್ರಾಮೀಣ ಕಲೆಗಳಾದ ಸೋಬಾನೆ ಪದ ಹಾಗೂ ರಂಗೋಲಿ ಸ್ಪರ್ಧೆಗಳನ್ನು 1.2.2019 ರಂದು, ಮಕ್ಕಳಿಗಾಗಿ ಗಾಳಿಪಟ ಸ್ಪರ್ಧೆಯನ್ನು 3.2.2019 ರಂದು ಏರ್ಪಡಿಸಲಾಗಿದೆ.



**ಸಾರ್ವಜನಿಕರಿಗೆ ಗ್ರಾಮೀಣ ಆಟಗಳ ಸ್ಪರ್ಧೆ:** ಗ್ರಾಮೀಣ ಭಾಗದ ಪುರುಷರಿಗೆ ದಿನಾಂಕ 3.2.2019 ರಂದು ಮತ್ತು ಮಹಿಳೆಯರಿಗೆ ದಿನಾಂಕ 4.2.2019ರಂದು ದೇಸಿ ಆಟಗಳಾದ ಕೆಸರುಗದ್ದೆ ಓಟ, ಹಗ್ಗಜಗ್ಗಾಟ, ಅಳಿಗುಳಿ ಮಣೆ, ಅಣ್ಣೆಕಲ್ಲು ಮುಂತಾದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ವಿಜೇತರಾದವರಿಗೆ ನಗದು ಬಹುಮಾನ, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿಪತ್ರ ನೀಡಲಾಗುವುದು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಗ್ರಾಮಾಂತರ ಹಾಗೂ ನಗರಪ್ರದೇಶಗಳ ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರಿಂದ 15ಕ್ಕೂ ಹೆಚ್ಚು ನಾಟಕಗಳು ಪ್ರದರ್ಶನಗೊಳ್ಳುತ್ತವೆ.

**ಕಲಾತಂಡಗಳಿಂದ ಪ್ರದರ್ಶನ:** ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳ ಕಲಾತಂಡಗಳಿಂದ ವರ್ಣರಂಜಿತ ಕಲಾಪ್ರದರ್ಶನಗಳು ನಡೆಯುತ್ತವೆ.

**ಪ್ರಸಾದ ವ್ಯವಸ್ಥೆ:** ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಲಕ್ಷಾಂತರ ಭಕ್ತಾದಿಗಳಿಗೆ ಪ್ರತಿನಿತ್ಯವೂ ಪ್ರಸಾದದ ವ್ಯವಸ್ಥೆ ಇರುತ್ತದೆ.

**ವಸತಿ ವ್ಯವಸ್ಥೆ:** ವಾಸ್ತವ್ಯಕ್ಕೆ ಅವಕಾಶವಿರುವ ಎಲ್ಲ ಖಾಯಂ ವಸತಿ ವ್ಯವಸ್ಥೆಗಳ ಜೊತೆಗೆ ಸಾವಿರಾರು ಮಂದಿಗೆ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನೂ ಕೂಡ ಮಾಡಲಾಗಿದೆ.

**ದನಗಳ ಜಾತ್ರೆ:** ದನಗಳ ಜಾತ್ರೆಯನ್ನು ಆರಂಭಿಸಿ 51 ವರ್ಷಗಳಾಗಿದೆ. ಉತ್ತಮ ರಾಸುಗಳಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.



**ಸಾಂಸ್ಕೃತಿಕ ಮೇಳ:** ಜೆಎಸ್‌ಎಸ್ ಅಂತರಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ ಭರತನಾಟ್ಯ, ಸಾಮೂಹಿಕ ನೃತ್ಯ, ವಚನಾಧಾರಿತ ನೃತ್ಯ, ಸಾಮೂಹಿಕ ಗಾಯನ ಸ್ಪರ್ಧೆಗಳಲ್ಲಿ



ಸುಮಾರು 3,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದು 450ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಪ್ರತಿ ದಿನ ಸಂಜೆ 7 ರಿಂದ 9 ರವರೆಗೆ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸಹ ವಿದ್ಯಾರ್ಥಿಗಳು ನಡೆಸಿಕೊಡಲಿದ್ದಾರೆ.

ಜಾತ್ರಾ ಮಹೋತ್ಸವದಲ್ಲಿ ಅನೇಕ ಮಠಾಧೀಶರು, ಮುಖ್ಯಮಂತ್ರಿ ಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರು, ಸಂಸದರು, ಶಾಸಕರು, ಗಣ್ಯರು ಹಾಗೂ ಕಲಾವಿದರು ಪಾಲ್ಗೊಳ್ಳಲಿದ್ದಾರೆ.





ಪುಷ್ಪಾಲಂಕೃತ ಶ್ರೀ ಕರ್ತೃ ಗದ್ದುಗೆ

## ಸಾರಿಗೆ ಸಂಪರ್ಕ



ಇಂದಿನಿಂದ ಆರಂಭವಾಗಲಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಗಳವರ ಜಾತ್ರಾ ಮಹೋತ್ಸವದಲ್ಲಿ ಭಾಗ ವಹಿಸುವವರ ಅನುಕೂಲಕ್ಕಾಗಿ ಫೆಬ್ರವರಿ 6ರವರೆವಿಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಖಾಸಗಿ ಸಾರಿಗೆ ಸಂಸ್ಥೆಗಳು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ ಹಾಗೂ ವಿವಿಧ ತಾಲ್ಲೂಕು ಕೇಂದ್ರಗಳಿಂದ ಸುತ್ತೂರು ಶ್ರೀಕ್ಷೇತ್ರಕ್ಕೆ ವಿಶೇಷ ಬಸ್ಸುಗಳ ವ್ಯವಸ್ಥೆ ಮಾಡಿವೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಜಾತ್ರಾ ಮಹೋತ್ಸವ ಸಮಿತಿ ಭಕ್ತಾದಿಗಳಲ್ಲಿ ಕೋರಿದೆ.



ಕರ್ತೃ ಗದ್ದುಗೆಯಲ್ಲಿ ಆದಿ ಜಗದ್ಗುರುಗಳವರ ಜಪಮಂತ್ರದಲ್ಲಿ ಲೀನರಾಗಿರುವ ವಿದ್ಯಾರ್ಥಿ ಗಣ.

# ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನ

ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ 62 ಪ್ರೌಢಶಾಲೆಗಳ ಒಟ್ಟು 150ಕ್ಕೂ ಹೆಚ್ಚು ಮಾದರಿಗಳನ್ನು ಪ್ರದರ್ಶಿಸಲಾಗಿದೆ. ಭೌತಶಾಸ್ತ್ರ ವಿಭಾಗದಲ್ಲಿ 23, ಜೀವವಿಜ್ಞಾನ ವಿಭಾಗದಲ್ಲಿ 10, ಗಣಿತ ವಿಭಾಗದಲ್ಲಿ 15, ಶಕ್ತಿಸಂಪನ್ಮೂಲ ವಿಭಾಗದಲ್ಲಿ 08, ಭಾಷಾ ವಿಭಾಗದಲ್ಲಿ 35, ಕಲೆ ಮತ್ತು ಸಂಸ್ಕೃತಿ ವಿಭಾಗದಲ್ಲಿ 09, ಆರೋಗ್ಯ ಮತ್ತು ಪರಿಸರ ವಿಭಾಗದಲ್ಲಿ 15, ಭೂ ವಿಜ್ಞಾನ ಮತ್ತು ಕೃಷಿ ವಿಭಾಗದಲ್ಲಿ 13, ದೇಶಿ ಆಟಗಳ ವಿಭಾಗದಲ್ಲಿ 06, ಸುತ್ತೂರಿನ ಪ್ರಾಥಮಿಕ ಶಾಲಾ ವಿಭಾಗದಿಂದ 17 ಮಾದರಿಗಳನ್ನು ಪ್ರದರ್ಶಿಸಲಾಗಿದೆ. ಒಟ್ಟು 308 ವಿದ್ಯಾರ್ಥಿಗಳು, 75 ಜನ ಶಿಕ್ಷಕರು ಭಾಗವಹಿಸಲಿದ್ದಾರೆ.

ಆಗಸ್ತ್ಯ ಫೌಂಢೇಶನ್ ವತಿಯಿಂದ ಕಾರ್ಯನಿರತ ಮಾದರಿಗಳನ್ನು ಪ್ರದರ್ಶಿಸಲಿದ್ದಾರೆ.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯವರು ಭಾಗವಹಿಸಲಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಶಾಲೆಗಳಲ್ಲಿ ವಿಜ್ಞಾನಾಭಿವೃದ್ಧಿ ಸಮಿತಿಯ ಸಂಚಾರಿ ಪ್ರಯೋಗಾಲಯದ ಮೂಲಕ ಮಾದರಿಗಳನ್ನು ಪ್ರದರ್ಶಿಸಲಿದ್ದಾರೆ.




ಜಾತ್ರಾ ಮಹೋತ್ಸವದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿಯನ್ನು ನೀಡುತ್ತಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು. ಚಿತ್ರದಲ್ಲಿ ಶ್ರೀ ಎಸ್.ಪಿ ಉದಯಶಂಕರ್‌ರವರು ಹಾಗೂ ಶ್ರೀ ಎಸ್. ಶಿವಕುಮಾರಸ್ವಾಮಿಯವರಿದ್ದಾರೆ.




### 1 ಫೆಬ್ರವರಿ 2019

**ಪ್ರಾತಃಕಾಲ 4.00 :** ಕರ್ತೃಗದ್ದುಗೆ: ಅನುಜ್ಞೆ ಮಹಾಸಂಕಲ್ಪಪೂರ್ವಕ ಮಹಾರುದ್ರಾಭಿಷೇಕ

**ಬೆಳಗ್ಗೆ 7.00 :** ಹಸಿರುವಾಣಿ ಅಲಂಕಾರ

**ಬೆಳಗ್ಗೆ 6.30 : ದೇವನೂರು : ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ**

**ಬೆಳಗ್ಗೆ 7.30 : ಷಟ್‌ಸ್ಥಲ ಧ್ವಜಾರೋಹಣ :** ನಿ.ಪ್ರ.ಸ್ವ.ಶ್ರೀ ಬಸವರಾಜೇಂದ್ರ ಸ್ವಾಮಿಗಳು, ಶ್ರೀ ಸಿದ್ಧಲಿಂಗೇಶ್ವರ ವಿರಕ್ತ ಮಠ ಕೆಸವತ್ತೂರು, ಅರಕಲಗೂಡು ತಾ.

**ಧರ್ಮಸಂದೇಶ :** ಷ.ಬ್ರ.ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಂಚಗೃಹ ಗುಡ್ಡದ ಹಿರೇಮಠ, ನರಗುಂದ

**ಬೆಳಗ್ಗೆ 8.00 : ಶ್ರೀಮಠ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ, ಶಿವಯೋಗಿಗಳವರ ಉತ್ಸವಮೂರ್ತಿಗೆ, ಅಲಂಕಾರ ಮತ್ತು ಮಹಾಮಂಗಳಾರತಿ

**ಸಂಜೆ 4.45 :** ನಂದಿಧ್ವಜೋತ್ಸವ

**ಸಂಜೆ 5.00 :** ಉತ್ಸವಮೂರ್ತಿಯನ್ನು ಶ್ರೀಮಠದಿಂದ ಕರ್ತೃಗದ್ದುಗೆಗೆ ಬಿಜಯಂಗೈಸುವುದು

**ರಾತ್ರಿ 7.00 :** ಕರ್ತೃಗದ್ದುಗೆ : ಅಗ್ರೋದಕ ಪುಣ್ಯಾಹ, ನಂದಿ ಅಂಕುರಾರ್ಪಣ, ಕಲಶ ಸ್ಥಾಪನೆ

**ರಾತ್ರಿ 7.30 :** ಮಹಾಮಂಗಳಾರತಿ




### 1 ಫೆಬ್ರವರಿ 2019 ಶುಕ್ರವಾರ

#### ಗದ್ದುಗೆ ಆವರಣ

**ಬೆಳಗ್ಗೆ 8.00 :** ನಾದಸ್ವರ

**9.00 :** ಭಕ್ತಿಗೀತೆ ಮತ್ತು ಭಾವಗೀತೆ : ಸ್ವರಾಂಜಲಿ ಸಂಗೀತ ಕೇಂದ್ರ, ರಾಮಕೃಷ್ಣನಗರ, ಮೈಸೂರು

**ಮಧ್ಯಾಹ್ನ 2.00 :** ಮೂರ್ಛೆರೋಗ ಕುರಿತು ಕಿರು ನಾಟಕ : ಶ್ರೀ ಎಸ್. ವೆಂಕಟೇಶ್ ಮತ್ತು ತಂಡ (ನಿಮ್ಹಾನ್ಸ್), ಬೆಂಗಳೂರು.

**ಮಧ್ಯಾಹ್ನ 2.30 :** ಸುಗಮ ಸಂಗೀತ : ಮಲ್ಲಿಗೆ ಕಲಾ ತಂಡ, ಮೈಸೂರು.

**ಸಂಜೆ 6.30 :** ಭರತನಾಟ್ಯ : ಶ್ರೀ ಡಿ.ಕೆ.ವಿಜಯಕುಮಾರ್, ಡಣಾಯಕನಪುರ, ಟಿ.ನರಸೀಪುರ ತಾ.

**ರಾತ್ರಿ 7.00 : ಸುಗಮ ಸಂಗೀತ :** ಶ್ರೀ ಪಿ. ಜವರನಾಯ್ಕ ಮತ್ತು ತಂಡ, ಆಗತ್ತೂರು, ಹೆಚ್.ಡಿ.ಕೋಟೆ ತಾ.

**8.30 : ತತ್ವಪದ ಮತ್ತು ರಂಗಗೀತೆ :** ಶ್ರೀ ಯಡದೊರೆ ಸಿದ್ದರಾಜು ಮತ್ತು ತಂಡ, ಟಿ.ನರಸೀಪುರ

**ನಾಟಕಗಳು * ರಾತ್ರಿ 10.00**

#### ಹಿರಿಯರಮನೆ ಆವರಣ

**ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ :** ಶ್ರೀ ಕೆಂಗಲ್ ಆಂಜನೇಯ ಸಾಂಸ್ಕೃತಿಕ ಕಲಾ ಟ್ರಸ್ಟ್ (ರಿ.), ಚನ್ನಪಟ್ಟಣ.

#### ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ

**ತ್ರಿಜನ್ಮ ಮೋಕ್ಷ ಅಥವಾ ಜಯವಿಜಯರ ಶಾಪವಿಮೋಚನೆ:** ಶ್ರೀ ರಾಮ ಭಕ್ತಮಂಡಳಿ, ಕೆಂಬಾಳು, ನಂಜನಗೂಡು ತಾ.

#### ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ

**ಶ್ರೀಕೃಷ್ಣ ಸಂಧಾನ ಅಥವಾ ಭಗವದ್ಗೀತೆ,** ಶ್ರೀ ಬಸವೇಶ್ವರ ಕಲಾ ಸಂಘ, ಬಿಳುಗಲಿ, ನಂಜನಗೂಡು ತಾ.

# ಶ್ರೀಕ್ಷೇತ್ರ ದರ್ಶನ




ಒಂದು ಸಾವಿರ ವರ್ಷಗಳ ಹಿಂದೆ ಕಪಿಲಾ ನದಿ ತೀರದ ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠವನ್ನು ಸಂಸ್ಥಾಪಿಸಿದರು. ತಮ್ಮ ದಿವ್ಯ ತಪೋ ಬಲದಿಂದ ಸುತ್ತೂರನ್ನು ಧರ್ಮಕ್ಷೇತ್ರವನ್ನಾಗಿಸಿದರು. ಚೋಳರು ಮತ್ತು ಗಂಗರ ನಡುವೆ ನಡೆಯಲಿದ್ದ ಘನಘೋರ ಯುದ್ಧವನ್ನು ನಿಲ್ಲಿಸಿದ, ಪೂಜ್ಯರು ಸಾಮರಸ್ಯ–ಶಾಂತಿಯ ದಾರಿ ತೋರಿದ ಮಹಿಮಾನ್ವಿತರು. ಶ್ರೀಮಠದ ಗುರು ಪರಂಪರೆಯ ಪೀಠಾಧಿಪತಿಗಳೆಲ್ಲರೂ ಶತಶತಮಾನಗಳಿಂದ ಸಮಾಜದ ಉನ್ನತಿಗಾಗಿ ನಾನಾ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಾಮಹಿಮರು.

ಶ್ರೀಮಠದ ಹನ್ನೊಂದನೆಯ ಜಗದ್ಗುರುಗಳಾದ ಶ್ರೀ ಘನಲಿಂಗ ಶಿವಯೋಗಿಗಳು ಮಧುರಭಾವದ ಶ್ರೇಷ್ಠ ವಚನ ಕಾರರು. 22ನೆಯ ಜಗದ್ಗುರುಗಳಾದ ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ಷಡಕ್ಷರಿ ಮಂತ್ರಲೇಖನ ತಪಸ್ಸು ಮತ್ತು 23ನೆಯ ಜಗದ್ಗುರುಗಳಾದ 'ರಾಜಗುರುತಿಲಕ' ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಾರಿ ತೋರಿದ ದಿವ್ಯಶಕ್ತಿ ಇಲ್ಲಿ ನೆಲೆಯಾಗಿ ನಿಂತಿವೆ.

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರು ಸಂಸ್ಥಾಪಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠದ (1954) ಆಶ್ರಯದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೆ ಮತ್ತು ವಿದೇಶ ಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಸಂಸ್ಥೆಗಳು, ಸೇವಾಕೇಂದ್ರ ಗಳು ಕಾರ್ಯ ನಿರ್ವಹಿಸುತ್ತಿವೆ. ಶ್ರೀಮಠದ ಪುನರ್ನಿರ್ಮಿತ ಕಟ್ಟಡದ ಪ್ರವೇಶೋತ್ಸವ 11.8.2013 ರಂದು ನೆರವೇರಿತು.




**ಮಹಾ ದಾಸೋಹ ಭವನ :** ಶ್ರೀಮಠದಲ್ಲಿ ನಡೆಯುತ್ತಿದ್ದ ದಾಸೋಹಕ್ಕೆ ಶ್ರೀ ಮಹದೇಶ್ವರರು ರಾಗಿಯನ್ನು ಬೀಸಿದುದು ಶ್ರೀಮಠದ ಇತಿಹಾಸದೊಂದಿಗೆ ಹಾಸುಹೊಕ್ಕಾಗಿದೆ. ಭಾರತದ ಪ್ರಧಾನಿ ಡಾ. ಮನಮೋಹನ್ ಸಿಂಗ್‌ರವರಿಂದ 12.2.2005 ರಂದು ಉದ್ಘಾಟನೆಯಾದ ದಾಸೋಹ ಭವನವು, ಸುತ್ತೂರು ಶ್ರೀಕ್ಷೇತ್ರ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಪ್ರಸಾದವನ್ನು ಹಾಗೂ ವಸತಿ ವ್ಯವಸ್ಥೆಯನ್ನು ನಿರಂತರವಾಗಿ ನೀಡುತ್ತಿದೆ.





**ಶ್ರೀ ಸೋಮೇಶ್ವರ ದೇವಾಲಯ:** ಶ್ರೀ ಸೋಮೇಶ್ವರ ದೇವಾಲಯವು ಮೇಲು ನೋಟಕ್ಕೆ ಹೊಸದಾಗಿ ಕಂಡು ಬಂದರೂ ಐತಿಹಾಸಿಕ ದೃಷ್ಟಿಯಿಂದ ಸಾಕಷ್ಟು ಪ್ರಾಚೀನ ವಾಗಿದ್ದು, ಕ್ರಿ.ಶ. 1032ರ ಹೊತ್ತಿಗಾಗಲೇ ತುಂಬ ಪ್ರಸಿದ್ಧ ವಾಗಿತ್ತು. ಆ ಸಂದರ್ಭದಲ್ಲಿ ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರು ಶ್ರೀಮಠದ 2ನೆಯ ಪೀಠಾಧಿಪತಿಗಳಾಗಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಶ್ರೀಮಠದ 22ನೇ ಜಗದ್ಗುರುಗಳಾದ ಪಟ್ಟದ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು 20.2.1935 ರಂದು ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದರು. 11.2.2005 ರಂದು ಪ್ರಸ್ತುತ ದೇವಾಲಯದ ಪುನರ್ ಜೀರ್ಣೋದ್ಧಾರ ಕಾರ್ಯ ನೆರವೇರಿದೆ.




**ಶ್ರೀ ವೀರಭದ್ರೇಶ್ವರಸ್ವಾಮಿ ದೇವಾಲಯ:** ಸುತ್ತೂರು ಶ್ರೀಕ್ಷೇತ್ರಕ್ಕೆ ಎರಡು ಮೈಲಿ ದೂರದ ಗುಡ್ಡವೊಂದರ ಮೇಲಿರುವ ಶ್ರೀ ವೀರಭದ್ರೇಶ್ವರ ದೇವಾಲಯವು 11.2.2005ರಲ್ಲಿ ಜೀರ್ಣೋ ದ್ಧಾರಗೊಂಡು ಪುನರ್ ಪ್ರತಿಷ್ಠಾಪನೆ, ಸುವರ್ಣ ಕಲಶಾ ರೋಹಣ ಹಾಗೂ ಕುಂಭಾಭಿಷೇಕಗಳು ನೆರವೇರಿವೆ.

**ಶ್ರೀ ನಾರಾಯಣಸ್ವಾಮಿ ದೇವಾಲಯ:** ಪೂಜ್ಯ ಶ್ರೀಗಳವರ ಸಂಕಲ್ಪದಂತೆ ಶ್ರೀ ನಾರಾಯಣಸ್ವಾಮಿ ದೇವಾಲಯವು ಮೂಲಸ್ಥಾನದಿಂದ ಸ್ಥಳಾಂತರಗೊಂಡು ಈಗ ಕಪಿಲಾನದಿ ತೀರದ ಪ್ರಶಾಂತ ಪರಿಸರದಲ್ಲಿ ಯಥಾವತ್ತಾಗಿ ಪುನರ್ ನಿರ್ಮಾಣಗೊಂಡಿದೆ. ಶ್ರೀ ನಾರಾಯಣಸ್ವಾಮಿ ದೇವಾಲಯವು




ನವರಂಗದಲ್ಲಿ 12 ಅಂಕಣಗಳನ್ನು ಹೊಂದಿದೆ. ಎಡ ಮತ್ತು ಬಲ ಭಾಗದ ಗೋಡೆಗಳಲ್ಲಿ ಗಾಳಿ ಮತ್ತು ಬೆಳಕು ಬರುವಂಥ ಗವಾಕ್ಷಿಗಳಿವೆ. ಈ ದೇವಾಲಯದ ಪುನರ್‌ಪ್ರತಿಷ್ಠಾಪನೆ, ಸುವರ್ಣ ಕಲಶಾರೋಹಣ ಹಾಗೂ ಕುಂಭಾಭಿಷೇಕ ಕಾರ್ಯ ಕ್ರಮಗಳು 3.2.2008ರಂದು ನೆರವೇರಿದವು.

ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ ಹಾಗೂ ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ಪ್ರತಿನಿತ್ಯವೂ ತ್ರಿಕಾಲ ಪೂಜೆ ನಡೆಯುವುದಲ್ಲದೆ, ಹಬ್ಬಹರಿದಿನಗಳಲ್ಲಿ ವಿಶೇಷ ಪೂಜೆ ನೆರವೇರುತ್ತದೆ.

ಗ್ರಾಮದೇವತೆಗಳಾದ ದೊಡ್ಡಮ್ಮತಾಯಿ ದೇವಸ್ಥಾನ ಹಾಗೂ ಸುತ್ತೂರಮ್ಮ ದೇವಸ್ಥಾನಗಳು ಶಿಥಿಲವಾಗಿದ್ದ ಹಿನ್ನೆಲೆಯಲ್ಲಿ, ಸರ್ಕಾರದ ಅನುದಾನದೊಂದಿಗೆ, ಹೆಚ್ಚುವರಿ ವೆಚ್ಚವನ್ನು ಶ್ರೀಮಠ ದಿಂದ ಭರಿಸಿ ಅವುಗಳ ಪುನರ್‌ನಿರ್ಮಾಣ ಮಾಡಲಾಗಿದೆ.

**ವೇದ ಪಾಠಶಾಲೆ:** ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಭಾಷೆ ಗಳನ್ನು ಕಲಿತಷ್ಟೂ ಜ್ಞಾನದ ಪರಿಧಿ ವಿಸ್ತಾರವಾಗುತ್ತದೆ ಎಂದು ನಂಬಿದ್ದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರು, 1962ರಲ್ಲಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಸ್ಕೃತ ವೇದ ಪಾಠಶಾಲೆಯನ್ನು ಸ್ಥಾಪಿಸುವ ಮೂಲಕ ಈ ಭಾಗದ ಮಕ್ಕಳಿಗೆ ಸಂಸ್ಕೃತ, ವೇದ, ಆಗಮ ಮತ್ತು ಜ್ಯೋತಿಷ್ಯಶಾಸ್ತ್ರಗಳ ಅಧ್ಯಯ ನಕ್ಕೆ ಅವಕಾಶ ಕಲ್ಪಿಸಿಕೊಟ್ಟರು.

**ಉಚಿತ ವಸತಿ ಶಾಲೆ:** ಶಿಕ್ಷಣವಂಚಿತ ಮಕ್ಕಳಿಗೂ ಶ್ರೀಮಂತ ರಿಗೆ ಲಭಿಸುವಂಥ ಎಲ್ಲ ಶಿಕ್ಷಣಸೌಲಭ್ಯಗಳು ದೊರೆಯಬೇಕೆಂಬ ಪೂಜ್ಯ ರಾಜೇಂದ್ರ ಶ್ರೀಗಳವರ ಸಂಕಲ್ಪ ಮತ್ತು ನಿರ್ಮಲಾಂತಃ ಕರಣದ ಫಲವಾಗಿ 2001ರಲ್ಲಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಉಚಿತ ಶಿಕ್ಷಣ ಯೋಜನೆ ಪ್ರಾರಂಭವಾಯಿತು.

ಭಾರತದ ಅಂದಿನ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರ ಅಮೃತ ಹಸ್ತದಿಂದ 27.12.2002ರಂದು ಶಾಲಾ ಕಟ್ಟಡ ಮತ್ತು ವಿದ್ಯಾರ್ಥಿ ನಿಲಯದ ಸಂಕೀರ್ಣಗಳು ವಿಧ್ಯುಕ್ತವಾಗಿ ಉದ್ಘಾಟನೆಗೊಂಡವು.




ಕರ್ನಾಟಕದ ವಿವಿಧ ಜಿಲ್ಲೆಗಳು, ನೆರೆಹೊರೆಯ ರಾಜ್ಯಗಳು, ಜೊತೆಗೆ ಮೇಘಾಲಯ, ಮಣಿಪುರ ರಾಜ್ಯಗಳ ಬಾಲಕಿಯರು, ಜಾರ್ಖಂಡ್, ಉತ್ತರಪ್ರದೇಶ ಹಾಗೂ ಬಿಹಾರಗಳಂಥ ದೂರದ ರಾಜ್ಯದ ಬಾಲಕರೂ ಸೇರಿದಂತೆ ಸಾವಿರಾರು ಸಂಖ್ಯೆಯ ಬಡವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಈ ಶಾಲೆಯಲ್ಲಿ 1 ರಿಂದ 10ನೇ ತರಗತಿಯವರೆಗೆ ಇಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳೊಂದಿಗೆ ಸುತ್ತಮುತ್ತಲ ಗ್ರಾಮಗಳಿಂದ ಬರುವ 1,000ಕ್ಕೂ ಹೆಚ್ಚು ಮಕ್ಕಳಿಗೆ ಮಧ್ಯಾಹ್ನ ಉಚಿತ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿದೆ. ಜಾತಿಮತಭೇದವಿಲ್ಲದೆ ಎಲ್ಲ ಅರ್ಹರಿಗೂ ಇಲ್ಲಿ ಪ್ರವೇಶ ನೀಡಲಾಗಿದೆ. ಈ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಇಂದು ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಮಕ್ಕಳು ಶಿಕ್ಷಣ ಪಡೆಯುತ್ತಿದ್ದು, ಸಾಮುದಾಯಿಕ ಸಮನ್ವಯತೆಗೆ ಇದು ಸಾಕ್ಷಿಯಂತಿದೆ.

**ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ. ಕಾಲೇಜು):** ಶಿಕ್ಷಣ ಮಹಾವಿದ್ಯಾಲಯವು (ಬಿ.ಇಡಿ.) ಪ್ರಾರಂಭವಾಗಿ 2004 ರಲ್ಲಿ ಸುತ್ತೂರಿಗೆ ವರ್ಗಾವಣೆಗೊಂಡಿತು. ಬೋಧನಾ ಅಭ್ಯಾಸಕ್ಕೆ ಹೇಳಿಮಾಡಿಸಿದಂತಿರುವ ಉಚಿತ ಶಾಲೆ ತರಗತಿಗಳು, ಉತ್ತಮ ಬೋಧಕ ವರ್ಗ, ಗ್ರಂಥಾಲಯ, ಕಂಪ್ಯೂಟರ್ ಪ್ರಯೋಗಾ ಲಯ, ವಿಶಾಲ ಕ್ರೀಡಾಂಗಣ, ಅಧ್ಯಯನಕ್ಕೆ ಬೇಕಾದ ಪ್ರಶಾಂತ ಪರಿಸರ – ಇವೆಲ್ಲವೂ ಈ ಕಾಲೇಜಿನ ವಿಶೇಷಾಂಶಗಳು.

ಕಾಲೇಜಿನಲ್ಲಿ ಗಣ್ಯ ಉಪನ್ಯಾಸಕರಿಂದ ವಿಶೇಷ ಉಪ ನ್ಯಾಸಗಳು, ಪ್ರಾತ್ಯಕ್ಷಿಕೆಗಳು, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳು ವುದಲ್ಲದೆ, ವ್ಯಕ್ತಿತ್ವ ವಿಕಸನ ತರಬೇತಿ ಮತ್ತು ಶೈಕ್ಷಣಿಕ ಪ್ರವಾಸದಂತಹ ಪಠ್ಯಪೂರಕ ಚಟುವಟಿಕೆಗಳನ್ನೂ ಏರ್ಪಡಿಸ ಲಾಗುತ್ತಿದೆ.

➤ 5ನೇ ಪುಟಕ್ಕೆ




# ಶ್ರೀಕ್ಷೇತ್ರ ದರ್ಶನ

## ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಗದ್ದುಗೆ

ತನ್ನ ತೆರೆತೆರೆಯಲ್ಲೂ ಶಿವನಾಮ ಜಪಿಸುತ್ತಿರುವಂತೆ ಹರಿಯುತ್ತಿರುವ ಕಪಿಲಾನದಿ, ಅದರ ಕಲರವಕ್ಕೆ ಇಂಬು ನೀಡುವ ಪಕ್ಷಿ ಸಂಕುಲ, ಸನಿಹದಲ್ಲೇ ಸೊಂಪಾಗಿ ಬೆಳೆದು ನಿಂತಿರುವ ವೃಕ್ಷಸಮೂಹ, ಕಣ್ಣಿಗೆ ಕಾಣುವಷ್ಟೂ ದೂರ ಹಬ್ಬಿ ಹರಡಿರುವ ಹಸಿರಿನ ಬತ್ತದ ಗದ್ದೆಗಳು. ಇಂಥ ಪ್ರಶಾಂತ ಪರಿಸರದಲ್ಲಿರುವ ಪ್ರಾಕೃತಿಕ ಸೌಂದರ್ಯದ ತಾಣವಾಗಿರುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತಪೋಭೂಮಿ, ಪುಣ್ಯಭೂಮಿಯೇ ಶ್ರೀ ಕರ್ತೃಗದ್ದುಗೆ.

(ನಾಲ್ಕನೇ ಪುಟದಿಂದ)

**ಜೆಎಸ್‌ಎಸ್ ಪ್ರಶಿಕ್ಷಕರ ಮಹಾವಿದ್ಯಾಲಯ (ಡಿ.ಇಡಿ. ಕಾಲೇಜು);** 1959ರಲ್ಲಿ ಮೈಸೂರಿನಲ್ಲಿ ಕಾರ್ಯಾರಂಭ ಮಾಡಿದ ಈ ಕಾಲೇಜು ಇಲ್ಲಿಯವರೆಗೆ ಸಾವಿರಾರು ಉತ್ತಮ ಶಿಕ್ಷಕರುಗಳನ್ನು ರೂಪಿಸಿದೆ. ಇದರ ಸುವರ್ಣ ಮಹೋತ್ಸವವನ್ನು ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರ ಉಪಸ್ಥಿತಿಯಲ್ಲಿ 2009ರಲ್ಲಿ ಆಚರಿಸಲಾಯಿತು. ವಿದ್ಯಾರ್ಥಿನಿಲಯ ಹಾಗೂ ಉತ್ತಮ ಸೌಲಭ್ಯಗಳನ್ನು ಹೊಂದಿರುವ ಕಾಲೇಜು ಇಂದಿಗೂ ಸಹ ಗ್ರಾಮೀಣ ಭಾಗದ ನೂರಾರು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುತ್ತಿದೆ.

**ಸಂಸ್ಕೃತ ಕಾಲೇಜು:** 2013ರಲ್ಲಿ ಸ್ಥಾಪನೆಗೊಂಡ ಸಂಸ್ಕೃತ ಕಾಲೇಜು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುತ್ತದೆ. ಜ್ಯೋತಿಷ್ಯ, ಶಕ್ತಿವಿಶಿಷ್ಟಾದ್ವೈತ, ವೇದಾಂತ ಹಾಗೂ ಅಲಂಕಾರಶಾಸ್ತ್ರ ವಿಷಯಗಳ ಮೂರು ವರ್ಷಗಳ ಕೋರ್ಸನ್ನು ನಡೆಸಲಾಗುತ್ತಿದೆ. ನೂರಾರು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ನೂತನ ಕಟ್ಟಡವು 2010ರಲ್ಲಿ ಉದ್ಘಾಟನೆಗೊಂಡು ಸಾರ್ವಜನಿಕರಿಗೆ ಸೇವೆ ಒದಗಿಸುತ್ತಿದೆ. 2014ರ ಜಾತ್ರಾಮಹೋತ್ಸವ ಸಂದರ್ಭದಲ್ಲಿ ಆಯುರ್ವೇದ ಆಸ್ಪತ್ರೆ, 24 ಗಂಟೆಗಳ ಸೇವೆಯನ್ನು ಒದಗಿಸುವ ಪ್ರಸೂತಿ ವಿಭಾಗ ಹಾಗೂ ಔಷಧ ಕೇಂದ್ರಗಳು ಆರಂಭವಾದವು. ದಂತ ಆರೋಗ್ಯ ಮತ್ತು ಸಂರಕ್ಷಣೆಯ ಅರಿವನ್ನು ಗ್ರಾಮೀಣ ಜನತೆಯಲ್ಲಿ ಮೂಡಿಸುವ ಸಲುವಾಗಿ 1999 ರಲ್ಲಿ ಪ್ರಾರಂಭವಾದ ಜೆಎಸ್‌ಎಸ್ ದಂತ ಚಿಕಿತ್ಸಾಲಯ–ಇವುಗಳು ಶ್ರೀ ಘನಲಿಂಗ ಶಿವಯೋಗಿಗಳವರ ಸಂಕೀರ್ಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸುತ್ತೂರು ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನತೆಗೆ ಅಗತ್ಯವಿರುವ ಚಿಕಿತ್ಸಾ ಸೌಲಭ್ಯಗಳನ್ನು ನೀಡುತ್ತಿವೆ.

**ಮಾದರಿ ಆರೋಗ್ಯ ಗ್ರಾಮಕ್ಕೆ ಚಾಲನೆ:** ಆಗಸ್ಟ್ 2003ರಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀಮತಿ ಸೋನಿಯಾ ಗಾಂಧಿಯವರು ಸುತ್ತೂರನ್ನು 'ಮಾದರಿ ಆರೋಗ್ಯ ಗ್ರಾಮ'ವಾಗಿ ರೂಪಿಸುವ ಯೋಜನೆಗೆ ಚಾಲನೆ ನೀಡಿದರು.

**ವಸ್ತುಸಂಗ್ರಹಾಲಯ:** ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ವಸ್ತುಸಂಗ್ರಹಾಲಯವೊಂದನ್ನು ರೂಪಿಸುವ ಮಹದಾಸೆಯಿತ್ತು. ಅದರಂತೆ ಸುತ್ತೂರು ಶ್ರೀಕ್ಷೇತ್ರದಲ್ಲಿ 2.2.2000 ರಂದು ವಸ್ತುಸಂಗ್ರಹಾಲಯ ಅನಾವರಣಗೊಂಡಿತು. ಸಹಸ್ರಾರು ಅಮೂಲ್ಯ ವಸ್ತುಗಳ ಭಂಡಾರವಾಗಿರುವ ಈ ವಸ್ತುಸಂಗ್ರಹಾಲಯ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ವಿಶೇಷ ಅನುದಾನವೂ ದೊರೆತಿದೆ. ಈ ವಸ್ತುಸಂಗ್ರಹಾಲಯವನ್ನು ಮತ್ತಷ್ಟು ವಿಸ್ತೃತಗೊಳಿಸಿ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸುವ ಕಾರ್ಯ ಭರದಿಂದ ಸಾಗಿದೆ. ಮುಂದಿನ ದಿನಗಳಲ್ಲಿ ಸುತ್ತೂರು ವಸ್ತು ಸಂಗ್ರಹಾಲಯವು ಪರಂಪರೆಯ ಪ್ರತಿರೂಪವಾಗಿ ರೂಪುಗೊಳ್ಳಲಿದೆ.

**ಶ್ರೀ ರಾಜೇಂದ್ರಕೃಪಾ ಅತಿಥಿಗೃಹ:** ಶ್ರೀಕ್ಷೇತ್ರಕ್ಕೆ ಆಗಮಿಸುವ ಅತಿಥಿಗಳು, ಗಣ್ಯರು ಮತ್ತು ಭಕ್ತರುಗಳ ವಾಸ್ತವ್ಯಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದೊಂದಿಗೆ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 6.4.1979 ರಂದು ಹೊಸ


ಶ್ರೀ ಬಸವೇಶ್ವರ ವಿದ್ಯಾರ್ಥಿ ನಿಲಯ

**ಉಚಿತ ವಿದ್ಯಾರ್ಥಿನಿಲಯಗಳು:** ಶ್ರೀಮಠದ ಈ ಉಚಿತ ವಿದ್ಯಾರ್ಥಿನಿಲಯಗಳಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಆಶ್ರಯ ಬಯಸಿ ಬರುವ ಸಾವಿರಾರು ವಿದ್ಯಾರ್ಥಿಗಳಿಗೆ ಹಾಗೂ ನೆರೆಯ ರಾಜ್ಯಗಳ, ಅಷ್ಟೇ ಅಲ್ಲದೆ ಈಶಾನ್ಯ ರಾಜ್ಯಗಳಿಂದ ಬರುವ ಸಾವಿರಾರು ವಿದ್ಯಾರ್ಥಿಗಳಿಗೆ ಎಲ್ಲ ಸೌಲಭ್ಯಗಳನ್ನೂ ಉಚಿತವಾಗಿ ನೀಡಿ ವಿದ್ಯಾರ್ಥಿಗಳ ಭೌತಿಕ ಹಾಗೂ ಬೌದ್ಧಿಕ ಹಸಿವನ್ನು ನೀಗಿಸುತ್ತಿರುವ ಈ ಸಂಸ್ಥೆ ವಿದ್ಯಾರ್ಥಿಗಳ ಬದುಕಿನ ಕ್ಷೇಮದ ಸಂಕೇತವಾಗಿದೆ.

ಬಾಲಕಿಯರ ವಿದ್ಯಾರ್ಥಿನಿಲಯವನ್ನು 2009ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್‌ರವರು ಉದ್ಘಾಟಿಸಿದರು.


ಹಿರಿಯರ ಮನೆ

**ಹಿರಿಯರ ಮನೆ:** ಬಾಳ ಮುಸ್ಸಂಜೆಯಲ್ಲಿ ಶಾಂತಿ, ನೆಮ್ಮದಿ ಅರಸಿ ಬರುವ ವೃದ್ಧರಿಗೆ ಆಶ್ರಯ ನೀಡುವ ಉದ್ದೇಶದೊಂದಿಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಆರಂಭವಾಗಿರುವ ಹಿರಿಯರ ಮನೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಮಂದಿಗೆ ವಾಸಕ್ಕೆ ಅವಶ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಹಿರಿಯ ನಾಗರಿಕರು ಸಂತೋಷದಿಂದ ಜೀವನ ಸಾಗಿಸಲು ಈ ಹಿರಿಯರ ಮನೆ ನೆರವಾಗಿದೆ.

**ಜೆಎಸ್‌ಎಸ್ ಆಸ್ಪತ್ರೆ, ದಂತ ಚಿಕಿತ್ಸಾಲಯ ಮತ್ತು ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಜೆಎಸ್‌ಎಸ್ ಆಸ್ಪತ್ರೆಯ


'ರೈತಮಿತ್ರ' ಕೃಷಿ ವಿಜ್ಞಾನ ಕೇಂದ್ರ

**'ರೈತಮಿತ್ರ' ಕೃಷಿ ವಿಜ್ಞಾನ ಕೇಂದ್ರ:** ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಸಹಯೋಗದೊಂದಿಗೆ 1994 ರಲ್ಲಿ ಸ್ಥಾಪನೆಯಾಯಿತು. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ರೈತರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು ಇದರ ಮುಖ್ಯ ಉದ್ದೇಶ. ಮೈಸೂರು ಜಿಲ್ಲೆಯು ಈ ಕೇಂದ್ರದ ವ್ಯಾಪ್ತಿಗೆ ಬರುತ್ತದೆ.

ರೈತರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ನಿರ್ಮಾಣವಾಗಿರುವ ಈ ಕೇಂದ್ರದ ಕಟ್ಟಡಗಳಲ್ಲಿ ಆಡಳಿತ ಕಛೇರಿ, ರೈತರ ವಸತಿನಿಲಯ, ಸಿಬ್ಬಂದಿ ವಸತಿನಿಲಯ, ಚಾಕಿ ಸಾಕಾಣಿಕಾ ಕೇಂದ್ರ ಮೊದಲಾದ ವಿಭಾಗಗಳು ಪ್ರಮುಖವಾದವು. ಅಗ್ರಿ ಕ್ಲಿನಿಕ್‌ನಲ್ಲಿ ರೈತರ ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶಗಳು, ಕ್ರಿಮಿನಾಶಕ ಇತ್ಯಾದಿಯನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಅತಿಥಿಗೃಹ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿದ್ದರು. ಅವರ ಸಂಕಲ್ಪದ ಈ ಸೌಧವನ್ನು 19.1.1996 ರಂದು ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರವರು ಉದ್ಘಾಟಿಸಿದರು. 36 ಸುಸಜ್ಜಿತ ಕೊಠಡಿಗಳನ್ನು ಹೊಂದಿರುವ 'ರಾಜೇಂದ್ರ ಕೃಪ' ಅತಿಥಿಗೃಹ ಶ್ರೀಕ್ಷೇತ್ರಕ್ಕೆ ಆಗಮಿಸುವ ಜನತೆಗೆ ಅಗತ್ಯ ಸೌಲಭ್ಯ ಕಲ್ಪಿಸುತ್ತಿದೆ.

**ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹ:** ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದ್ದು, ಇಲ್ಲಿಗೆ ಬರುವವರ ವಾಸ್ತವ್ಯಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹವನ್ನು ನಿರ್ಮಿಸಲಾಗಿದೆ. 2014ರಲ್ಲಿ ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರು ಈ ಸಂಕೀರ್ಣವನ್ನು ಉದ್ಘಾಟಿಸಿದರು.

**ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ:** ಶ್ರೀಕ್ಷೇತ್ರದಲ್ಲಿ ಜರುಗುವ ಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗವಾಗುವ ರೀತಿಯಲ್ಲಿ ಸುವಿಶಾಲವಾಗಿ ನಿರ್ಮಾಣವಾಗಿರುವ ಸಮುದಾಯ ಭವನದಲ್ಲಿ ವಿಶಾಲವಾದ ಸಭಾಭವನ, ಭೋಜನಶಾಲೆ, ಕೊಠಡಿಗಳು, ಅಡಿಗೆಮನೆ ಎಲ್ಲವೂ ಅತ್ಯಂತ ವ್ಯವಸ್ಥಿತವಾಗಿವೆ. ಸಾರ್ವಜನಿಕ ಸೇವೆಗೆ ಲಭ್ಯವಿರುವ ಮಂಗಳಮಂಟಪವು ಮದುವೆ ಮತ್ತಿತರ ಶುಭ ಸಮಾರಂಭಗಳಿಗೆ ಶ್ರೀಸಾಮಾನ್ಯರ ಕೈಗೆಟುಕುವ ದರದಲ್ಲಿ ದೊರೆಯುತ್ತದೆ. ಸುತ್ತಮುತ್ತಲ ಗ್ರಾಮಗಳ ಜನಸಾಮಾನ್ಯರ ಅವಶ್ಯಕತೆಗಳನ್ನು ಇದು ಸಮರ್ಥವಾಗಿ ಪೂರೈಸುತ್ತಿದೆ. ಇದರ ಉದ್ಘಾಟನೆಯನ್ನು 2006ರಲ್ಲಿ ಮುಖ್ಯಮಂತ್ರಿ ಶ್ರೀ ಎಚ್.ಡಿ. ಕುಮಾರಸ್ವಾಮಿಯವರು ನೆರವೇರಿಸಿದರು.

**ಶ್ರೀ ಈಶಾನೇಶ್ವರ ಸಂಕೀರ್ಣ:** ಶ್ರೀಕ್ಷೇತ್ರದ ಪ್ರವೇಶ ಭಾಗದಲ್ಲಿರುವ ಮೈಸೂರು ವೃತ್ತದ ➢ 6ನೇ ಪುಟಕ್ಕೆ

# ಜಾತ್ರೆಯೊಳಗೊಂದು ಸುತ್ತು...



ಹೈದರಾಬಾದಿನವಳಾದ ನಾನು ಮೈಸೂರು ಜೆಎಸ್‌ಎಸ್ ಮೆಡಿಕಲ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ನನ್ನ ಪ್ರಕಾರ ಇದು ಕರ್ನಾಟಕದ ನಂಬರ್ ಒನ್ ಜಾತ್ರೆ ಎಂದು ಹೇಳಬಹುದು. ಇದು ವೈವಿದ್ಯಮಯ ಜಾತ್ರೆಯಾಗಿದ್ದು, ಮೊದಲಿಗೆ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದು, ಇಲ್ಲಿನ ವ್ಯವಸ್ಥೆಯನ್ನು ನೋಡಿ ಬಹಳ ಖುಷಿಯಾಗಿದೆ. 6 ದಿನಗಳ ಜಾತ್ರೆಯನ್ನು ಕಣ್‌ತುಂಬಿಕೊಳ್ಳುತ್ತೇನೆ.

**– ಡಾ. ಅಪೂರ್ವ, ಹೈದರಾಬಾದ್**



ನಾವು ಕುಟುಂಬ ಸಮೇತ ಇದೇ ಮೊದಲಬಾರಿಗೆ ಜಾತ್ರೆ ನೋಡಲು ಬಂದಿದ್ದೇವೆ ಸುತ್ತೂರು ಜಾತ್ರೆಯ ಸಿದ್ಧತೆ ನೋಡಿ ಬೆರಗಾಗಿದ್ದೇವೆ. ನಮ್ಮ ಮಕ್ಕಳು ಇಲ್ಲಿನ ಶಾಲೆಯಲ್ಲೇ ಓದಿದ್ದಾರೆ. ಬಹಳ ಖುಷಿಯಿಂದ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದೇವೆ. 6 ದಿನಗಳ ಜಾತ್ರೆಯನ್ನು ಮನ ತುಂಬಿಸಿಕೊಳ್ಳಲು ಕಾತುರರಾಗಿದ್ದೇವೆ.

**– ಲಿಂಗಮ್ಮ, ರಾಯಚೂರು ಜಿಲ್ಲೆ**



ನಾನು ಇಲ್ಲಿ ಜಾತ್ರೆ ಸಿದ್ಧತಾ ಕಾರ್ಯದಲ್ಲಿ ತೊಡಗಿದ್ದೇನೆ. ಸುಮಾರು 28 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಾ ಬಂದಿದ್ದೇನೆ. ಪೂಜ್ಯ ಸ್ವಾಮಿಗಳವರಲ್ಲೇ ನಾನು ದೇವರನ್ನು ಕಾಣುತ್ತಿದ್ದೇನೆ. ನನಗೆ ಇಲ್ಲಿನ ಸಿದ್ದತೆ ಕೆಲಸಗಳನ್ನು ಮಾಡಲು ಬಹಳ ಹೆಮ್ಮೆ ಎನಿಸುತ್ತದೆ.

**– ತಮ್ಮಯ್ಯಚಾರ್ಯ, ಮೈಸೂರು**



ಸುತ್ತೂರಿನ ಶಾಲೆಯಲ್ಲಿ ಕಲಿಯುತ್ತಿರುವ ನಾನು, ಅನ್ನ, ಅಕ್ಷರ, ಅರೋಗ್ಯ ನೀಡುತ್ತಿರುವ ಶ್ರೀಗಳನ್ನು ಮಾತೃಸ್ಥಾನದಲ್ಲಿಟ್ಟು ಪೂಜಿಸುತ್ತೇನೆ. ನಮಗೆ ತಿಂಗಳಿಗೊಮ್ಮೆ ಸ್ವಚ್ಛ ಭಾರತ ಅಭಿಯಾನದ ಬಗ್ಗೆ ಮಾಹಿತಿಯನ್ನು ಕೊಡುತ್ತಾರೆ. ಮತ್ತು ಜೀವನದ ಮೌಲ್ಯಗಳ ಬಗ್ಗೆ ಅರಿವನ್ನು ಮೂಡಿಸುತ್ತಿದ್ದಾರೆ. ರಾಜ್ಯದ ಮೂಲೆ ಮೂಲೆಗಳಲ್ಲೂ ಈ ಸಂಸ್ಥೆಯ ಜಾಹಿರಾತು ವಾಹನವನ್ನು ಕಳುಹಿಸುವ ಮೂಲಕ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ದಾರಿದೀಪವಾಗಿದ್ದಾರೆ.

**– ಲಕ್ಷ್ಮಿ, ಸುತ್ತೂರು ಶಾಲಾ ವಿದ್ಯಾರ್ಥಿ, ಬೆಳಗಾಂ**

ನಾನು ಹನ್ನೆರಡು ವರ್ಷಗಳಿಂದ ಗೃಹರಕ್ಷಕದಳದವಳಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಮೈಸೂರಿನಿಂದ ಸುಮಾರು 120 ಜನ ಬಂದಿದ್ದೇವೆ. ಇಲ್ಲಿ ವಸತಿ ಸೌಲಭ್ಯವು ಸಹ ಬಹಳ ಚೆನ್ನಾಗಿದೆ. ಇದುವರೆವಿಗೂ ಸೇವೆ ಸಲ್ಲಿಸಿರುವ ಸ್ಥಳಗಳಿಗಿಂತ ಸುತ್ತೂರು ಶ್ರೀಕ್ಷೇತ್ರ ಶ್ರೇಷ್ಠವಾಗಿದೆ.

**– ಪಾರ್ವತಮ್ಮ, ಹೆಚ್.ಡಿ. ಕೋಟೆ**

–ಸುನೀತಾ ಸಿ.ಕೆ., ಹರ್ಷಿತಾ ಎಂ., ಸುಭಶ್ರೀ ಡಿ.ಎನ್.




**1 ಫೆಬ್ರವರಿ 2019 ಶುಕ್ರವಾರ * ಬೆಳಗ್ಗೆ 10.30**

**ವಸ್ತುಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ : ಉದ್ಘಾಟನೆ**

**ಸಮ್ಮುಖ: ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು,** ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಆದಿಚುಂಚನಗಿರಿ ಕ್ಷೇತ್ರ. **ಶ್ರೀ ಸ್ವಾಮಿ ವಿಶುದ್ಧಾನಂದಜಿ,** ಅಧ್ಯಕ್ಷರು, ಶ್ರೀ ಶಿವಗಿರಿ ಮಠ, ವರ್ಕಲ್ ತಿರುವನಂತಪುರ, ಅಧ್ಯಕ್ಷರು: ಶ್ರೀ **ಹೆಚ್.ಡಿ. ರೇವಣ್ಣ,** ಲೋಕೋಪಯೋಗಿ ಸಚಿವರು. **ವಸ್ತುಪ್ರದರ್ಶನ ಉದ್ಘಾಟನೆ:** ಶ್ರೀ **ಡಿ.ಕೆ ಶಿವಕುಮಾರ್,** ಭಾರಿ, ಮಧ್ಯಮ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು. **ಕೃಷಿ ಮೇಳ ಉದ್ಘಾಟನೆ:** ಶ್ರೀ **ದಿನೇಶ್ ಆರ್. ಗುಂಡೂರಾವ್,** ಶಾಸಕರು ಹಾಗೂ ಮಾಜಿ ಸಚಿವರು. **ಸಾಂಸ್ಕೃತಿಕ ಮೇಳ ಉದ್ಘಾಟನೆ:** ಶ್ರೀ **ಈಶ್ವರ್ ಬಿ. ಖಂಡ್ರೆ,** ಶಾಸಕರು ಹಾಗೂ ಮಾಜಿ ಸಚಿವರು

**ಮುಖ್ಯ ಅತಿಥಿಗಳು:** ಶ್ರೀ **ಎಂ. ಕೃಷ್ಣಪ್ಪ,** ಶಾಸಕರು ಹಾಗೂ ಮಾಜಿ ಸಚಿವರು, **ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ,** ವಿಧಾನಸಭಾ ಸದಸ್ಯರು, ನಿಪ್ಪಾಣಿ, ಶ್ರೀ **ಆನಂದ್ ಸಿದ್ದು ನ್ಯಾಮಗೌಡ,** ವಿಧಾನಸಭಾ ಸದಸ್ಯರು, ಜಮಖಂಡಿ, **ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ,** ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಶ್ರೀ **ಶಂಕರ ಮಹಾದೇವ ಬಿದರಿ,** ನಿವೃತ್ತ ಪೋಲೀಸ್ ಮಹಾನಿರ್ದೇಶಕರು, ಶ್ರಿ **ಎಸ್.ಎ. ಚಿನ್ನೇಗೌಡ,** ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಶ್ರೀ **ಹೆಚ್.ಎಸ್. ಸೋಮಶೇಖರ್,** ವರ್ತಕರು, ಬೆಂಗಳೂರು, ಶ್ರೀ **ಬಾಬು ಕೀಲಾರ,** ಉಪಾಧ್ಯಕ್ಷರು, ಹೆಚ್.ಎನ್.ಟಿ.ಬಿ. ಕಾರ್ಪೊರೇಷನ್, ನ್ಯೂಜೆರ್ಸಿ, ಅಮೆರಿಕ

**ಸಂಜೆ 4.00: ದೇಶಿ ಆಟಗಳು, ದೋಣಿವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ ಉದ್ಘಾಟನೆ**

– ಸಮ್ಮುಖ: ನಿ.ಪ್ರ.ಸ್ವ.ಶ್ರೀ ಸಂಪಾದನ ಸ್ವಾಮಿಗಳು, ಶ್ರೀ ಸಂಪಾದನ ಚರಮೂರ್ತಿ ಮಠ, ಚಿಕ್ಕೋಡಿ, ಷ.ಬ್ರ.ಡಾ.ಶ್ರಿ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸೂರ್ಯಸಿಂಹಾಸನ ಮಠ, ವಾಟಾಳು, **ಅಧ್ಯಕ್ಷತೆ:** ಶ್ರೀ ಎಂ.ಸಿ ಮನಗೂಳಿ, ತೋಟಗಾರಿಕೆ ಸಚಿವರು. **ಉದ್ಘಾಟನೆ:** ಶ್ರೀ ಡಿ.ಸಿ ತಮ್ಮಣ್ಣ, ಸಾರಿಗೆ ಸಚಿವರು. ರಂಗೋಲಿ ಸ್ಪರ್ಧೆ ಉದ್ಘಾಟನೆ: ಡಾ. ಜಯಮಾಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು. **ಸೋಬಾನೆ ಪದ ಸ್ಪರ್ಧೆ ಉದ್ಘಾಟನೆ:** ಶ್ರೀಮತಿ ಲಕ್ಷ್ಮೀ ಆರ್. ಹಬ್ಬಾಳ್ಕರ್, ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಖನಿಜ ನಿ.

**ಮುಖ್ಯ ಅತಿಥಿಗಳು:** ಶ್ರೀ **ಎನ್. ಮಹೇಶ್,** ಶಾಕರು ಹಾಗೂ ಮಾಜಿ ಸಚಿವರು, ಶ್ರೀ **ಅಲ್ಲಂ ವೀರಭದ್ರಪ್ಪ,** ಶಾಸಕರು ಹಾಗೂ ಮಾಜಿ ಸಚಿವರು, **ಡಾ. ಗೀತಾ ಮಹದೇವಪ್ರಸಾದ್,** ಮಾಜಿ ಸಚಿವರು, ಶ್ರೀ **ಕೆ. ಮಹದೇವ್,** ವಿಧಾನಸಭಾ ಸದಸ್ಯರು, ಪಿರಿಯಾಪಟ್ಟಣ, ಶ್ರೀ **ಮಹಿಮಾ ಜೆ. ಪಟೇಲ್,** ಮಾಜಿ ವಿಧಾನಸಭಾ ಸದಸ್ಯರು, ಶ್ರೀ **ಸುಧಾಕರ್ ಎಸ್. ಶೆಟ್ಟಿ,** ಅಧ್ಯಕ್ಷರು, ಎಫ್‌ಕೆಸಿಸಿಐ, ಬೆಂಗಳೂರು, ಶ್ರೀ **ಕೆ.ವಿ ಶರತ್ ಚಂದ್ರ,** ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, **ಶ್ರೀಮತಿ ಕೆ. ಜ್ಯೋತಿ,** ಸಿಇಓ, ಜಿಲ್ಲಾ ಪಂಚಾಯತ್, ಮೈಸೂರು.

## ಶ್ರೀಕ್ಷೇತ್ರ ದರ್ಶನ



ಶ್ರೀ ರಾಜೇಂದ್ರಕೃಪಾ ಅತಿಥಿಗೃಹ



ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹ



ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ

**(5ನೇ ಪುಟದಿಂದ)**


ಸಮೀಪ ತಲೆಯೆತ್ತಿ ನಿಂತಿರುವ ಶ್ರೀ ಈಶಾನೇಶ್ವರ ಸಂಕೀರ್ಣದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಾರ್ಯನಿರ್ವಹಿಸುತ್ತಿದೆ. ಮೊದಲನೆಯ ಮತ್ತು ಎರಡನೆಯ ಮಹಡಿಗಳಲ್ಲಿರುವ ಕೊಠಡಿಗಳಲ್ಲಿ ನೌಕರಬಂಧುಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಇದೇ ಸಂಕೀರ್ಣದಲ್ಲಿ ದೂರವಾಣಿ ಸಂಪರ್ಕ ಕೇಂದ್ರವೂ ಇದೆ.

**ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲ:** ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾಧಕರಿಗಾಗಿ ನೂತನ ಗುರುಕುಲ ಕಟ್ಟಡವನ್ನು ನಿರ್ಮಿಸಲಾಗಿದೆ. 5.5 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಿರುವ ನೂತನ ಗುರುಕುಲ ಕಟ್ಟಡವನ್ನು ಭಾರತದ ಉಪರಾಷ್ಟ್ರಪತಿಗಳಾದ ಶ್ರೀ ಎಂ. ವೆಂಕಯ್ಯ ನಾಯ್ಡುರವರು 28.8.2018 ರಂದು ಉದ್ಘಾಟಿಸಿದರು. ಮಠಾಧಿಪತಿಗಳಾಗುವವರಿಗೆ ಪಾರಂಪರಿಕ ಹಾಗೂ ಆಧುನಿಕ ಜ್ಞಾನದ ಅರಿವು ಇರುವುದು ಅಗತ್ಯವೆಂದು ಭಾವಿಸಿ ಪೂಜ್ಯರು 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಗುರುಕುಲ'ವನ್ನು 1951 ರಲ್ಲಿ ಮೈಸೂರಿನಲ್ಲಿ ಸ್ಥಾಪಿಸಿದರು. ಇಲ್ಲಿ ನೂರಾರು ಸಾಧಕರು ಅಧ್ಯಯನ ಕೈಗೊಂಡು ಅನಂತರ ತಮ್ಮ ತಮ್ಮ ಕ್ಷೇತ್ರಗಳಿಗೆ ಹಿಂದಿರುಗಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಸುತ್ತೂರಿನ ಗುರುಕುಲದ ಸಾಧಕರು ಪ್ರೌಢಶಾಲೆಯವರೆಗೆ ಸುತ್ತೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಬಳಿಕ ಮೈಸೂರಿಗೆ ತೆರಳಿ ಅಲ್ಲಿನ ಗುರುಕುಲದಲ್ಲಿದ್ದುಕೊಂಡು ಉನ್ನತ ಶಿಕ್ಷಣ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿದೆ.

ಈ ಸಂದರ್ಭದಲ್ಲಿ ಶ್ರೀಕ್ಷೇತ್ರಕ್ಕೆ ಧಾರ್ಮಿಕ ಮುಖಂಡರುಗಳು, ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ರಾಜ್ಯಪಾಲರುಗಳು, ರಾಜ್ಯಗಳ ಮುಖ್ಯಮಂತ್ರಿಗಳು, ಸಾಹಿತಿಗಳು, ಕಲಾವಿದರುಗಳು – ಹೀಗೆ ಹಲವಾರು ಗಣ್ಯರು ಭೇಟಿ ನೀಡುತ್ತಾರೆ.



ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲ




ಶ್ರೀ ಅಕ್ಕಮಹಾದೇವಿ ಬಾಲಕಿಯರ ವಿದ್ಯಾರ್ಥಿನಿಲಯ





ಗುರುವಾರ ಸಂಜೆ ಶ್ರೀ ಎಸ್.ಪಿ. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜಾತ್ರಾ ಮಹೋತ್ಸವದ ವಿವಿಧ ಸಮಿತಿಗಳ ಸಂಚಾಲಕರು ಹಾಗೂ ಕಾರ್ಯಕರ್ತರ ಮಾರ್ಗದರ್ಶನ ಸಭೆಗೂ ಮುನ್ನ ಸಿದ್ಧಗಂಗಾ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪುಣ್ಯಸ್ಮರಣೆ ಮಾಡಿದ ದೃಶ್ಯ.

# ರೈತರ ಪಾಲಿನ ವಿಶ್ವವಿದ್ಯಾನಿಲಯ – ಕೃಷಿಮೇಳ



ರೈತರಿಗೆ ಕೃಷಿ ಬಗ್ಗೆ ತಿಳುವಳಿಕೆ ಹಾಗೂ ಅವರ ಸ್ವಾವಲಂಬನೆ ಜೀವನಕ್ಕೆ ಸಿದ್ಧಗೊಂಡಿರುವ ಕೃಷಿಮೇಳವನ್ನು ಈ ಬಾರಿ 3 ಭಾಗಗಳಾಗಿ ವಿಂಗಡಿಸಲಾಗಿದ್ದು, ಅದರಲ್ಲಿ ತೋಟಗಾರಿಕೆಯು ಮೊದಲನೆಯದ್ದಾಗಿದ್ದು, 60 ಬೇರೆ ತರಹದ ದೇಶಿಯ ಹಾಗೂ ವಿದೇಶಿಯ ತರಕಾರಿ ಮತ್ತು ಹೂವುಗಳನ್ನು ಒಳಗೊಂಡಿವೆ. ಇದರ ಜೊತೆಗೆ ಮುಖ್ಯವಾಗಿ ಯುವ ಮನಸ್ಸುಗಳನ್ನು ಸೆಳೆಯಲು ವಿಶೇಷವಾಗಿ ಸಿದ್ದವಾಗಿರುವ ಸೆಲ್ಫಿ ತೋಟ ಇಲ್ಲಿ ಕಂಡುಬರುತ್ತದೆ.

ಕೃಷಿ ಮೇಳದ ಎರಡನೇ ಭಾಗವಾಗಿ ಕೃಷಿ ಬ್ರಹ್ಮಾಂಡ ಸಿದ್ದವಾಗಿದೆ. ಇದರಿಂದ ಸಣ್ಣ ಹಾಗೂ ಅತಿ ಸಣ್ಣ ರೈತರು ಸ್ವಾವಲಂಬನೆ ಬದುಕನ್ನು ಕಟ್ಟಿಕೊಳ್ಳಲು ಕೃಷಿ ಬ್ರಹ್ಮಾಂಡ ನೆರವಾಗಲಿದೆ. 1 ಎಕರೆಯಲ್ಲಿ ಎಲ್ಲ ರೀತಿಯ ಬೆಳೆಗಳನ್ನು ಮತ್ತು ಔಷಧಿ ಬೆಳೆಗಳು, ಕೋಕನೆಟ್, ಮಳೆ ನೀರು ಸಂಗ್ರಹಣೆ, ಮೀನುಗಾರಿಕೆ ಮತ್ತು ಜೇನು ಸಾಕಾಣಿಕೆ ವಿಶೇಷವಾಗಿ ಕುಟೀರವೊಂದನ್ನು ನಿರ್ಮಿಸಲಾಗಿದ್ದು, ಅಲ್ಲಿ ಪಶುಸಂಗೋಪನೆಯನ್ನು ಸಹ ಮಾಡಬಹುದಾದ ವ್ಯವಸ್ಥೆ ಇದೆ.

ಒಟ್ಟಾರೆಯಾಗಿ ಕೃಷಿ ಮೇಳದಲ್ಲಿ 108 ವಿದೇಶಿ ಆಹಾರ ಬೆಳೆಗಳನ್ನು ಬೆಳೆಯಲಾಗಿದ್ದು, ನಾಲ್ಕು ಉದ್ಯಮಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ಪ್ರಮುಖ ವಿದೇಶಿ ಬೆಳೆಗಳಾದ ಟೆಫ್ – ಆಫ್ರಿಕಾದ ಇತೋಪಿಯಾ ಬೆಳೆ, ಚಿಯಾ – ದಕ್ಷಿಣ ಅಮೇರಿಕಾದ ಬೆಳೆ, ಇದರ ಜೊತೆಗೆ ದೇಶಿಯ ಬೆಳೆಗಳಾದ ಸಿರಿಧಾನ್ಯಗಳನ್ನು ಒಳಗೊಂಡಿದೆ. ಪ್ರಮುಖವಾಗಿ ಸಾಮೆ, ನವಣೆ, ರಾಗಿ, ಬರಗು ಅಲ್ಲದೆ ದ್ವಿದಳ ದಾನ್ಯಗಳು, ವಾಣಿಜ್ಯ ಬೆಳೆಗಳನ್ನು ಬೆಳೆದಿರುವುದಲ್ಲದೇ ದೇಸಿಯ ತಳಿಗಳನ್ನೊಳಗೊಂಡ ಪಶುಗಳ ಪ್ರದರ್ಶನದ ನಾಲ್ಕನೇ ಭಾಗವಾಗಿ ಕೃಷಿ ಮೇಳದ ವಸ್ತುಪ್ರದರ್ಶದಲ್ಲಿ ಕಂಡುಬರುತ್ತದೆ.

ಕೃಷಿ ಸಂಶೋಧನೆಗಾಗಿ ಕೃಷಿ ಮಳಿಗೆಗಳಿದ್ದು, ರಸಗೊಬ್ಬರಗಳು, ಕೃಷಿ ಉತ್ಪನ್ನಗಳ ಬಗ್ಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದು ರೈತರಿಗೆ ಮಾಹಿತಿ ನೀಡಲಾಗುತ್ತದೆ.

ಕೃಷಿ ಮೇಳವು ವಿದ್ಯಾರ್ಥಿಗಳಿಗೆ, ರೈತರಿಗೆ ಹೆಚ್ಚಿನ ರೀತಿಯಲ್ಲಿ ಉಪಯೋಗವಾಗುತ್ತದೆ ಎಂದು ಕೃಷಿ ಮೇಳದ ಮುಖ್ಯಸ್ಥರಾದ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಶ್ರೀ ಅರುಣ್ ಬಳಮಟ್ಟಿಯವರು ತಿಳಿಸಿದರು. **–ಸೋಮೇಶ್ ಎಸ್.**

**ಸುತ್ತೂರು ಜಾತ್ರೆಯ ನೇರ ವೀಕ್ಷಣೆಗಾಗಿ**
**www.jssonline.org**

## ಶ್ರೀಗಳು ನುಡಿದಂತೆ...

(1ನೇ ಪುಟದಿಂದ)

ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿದರು. ಅನೇಕ ಮಂದಿ ಬಡ ಮಕ್ಕಳಿಗೆ ವಿದ್ಯಾದಾನ ಮಾಡ ತಕ್ಕಂಥ ಒಂದು ಪುಣ್ಯಮಯ ಕಾರ್ಯವನ್ನು ಕೈಗೊಂಡಿದ್ದಾರೆ. ತಮ್ಮ ಒಂದು ಪ್ರಭೆಯಿಂದ ಸಾವಿರಾರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಆ ವ್ಯಕ್ತಿಗಳು ವಿದ್ಯಾವಂತರಾಗಿ ತನ್ಮೂಲಕ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬೇರೆ ಬೇರೆ ಕ್ಷೇತ್ರದಲ್ಲಿ ಜೀವನವನ್ನು ನಡೆಸತಕ್ಕಂಥ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ. ನಿಜಕ್ಕೂ ಕೂಡ ಇದು ಶ್ರೀಮಠದ ಪುಣ್ಯಮಯ ಕಾರ್ಯವಿದಾಗಿದೆ.

**(ಅರ್ಚನ ಕೃತಿಯಿಂದ)**

## ಜಾತ್ರೆಯಲ್ಲಿ ವಿವಿಧ ಮಳಿಗೆಗಳು

ಜಾತ್ರೆಯೆಂದಕೂಡಲೇ ನೆನಪಿಗೆ ಬರುವುದು ಸುತ್ತೂರು ಜಾತ್ರೆ. ಈ ಜಾತ್ರೆಗೆ ಇನಷ್ಟು ಮೆರಗು ತರುವುದೇ ಜಾತ್ರೆಯಲ್ಲಿರುವ ಮಳಿಗೆಗಳು. ಈ ವರ್ಷದ ಸುತ್ತೂರು ಜಾತ್ರೆಯಲ್ಲಿ ಎಂದಿನಂತೆಯೇ ಮಳಿಗೆಗಳು ವಿಜೃಂಭಿಸುತ್ತಿವೆ. ಚಾಟ್ ಸೆಂಟರ್‌ಗಳು, ಹೋಟೆಲ್‌ಗಳು ಇನ್ನಿತರ ಆಟಿಕೆಗಳ ಮಳಿಗೆಗಳು ಜಾತ್ರೆಗೆ ಇನ್ನಷ್ಟು ಮೆರಗು ತಂದಿವೆ. ಇನ್ನು ವ್ಯಾಪಾರಿಗಳಂತೂ ಸುತ್ತೂರು ಜಾತ್ರೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ದೂರದಿಂದ ಬರುವ ಭಕ್ತಾದಿಗಳನ್ನು ತಂಪಾಗಿರಿಸಲು ಅಲ್ಲಲ್ಲಿ ಐಸ್‌ಕ್ರೀಂ ಹಾಗೂ ಹಣ್ಣಿನ ಅಂಗಡಿಗಳನ್ನು ತೆರೆದಿರುವ ವ್ಯಾಪಾರಿಗಳು ಬಿಸಿಲಿನಲ್ಲಿ ದಣಿದು ಬರುವ ಭಕ್ತಾದಿಗಳಿಗೆ ಕಬ್ಬಿನ ಹಾಲು, ಐಸ್‌ಕ್ರೀಂ ಮಾರಾಟ ಮಾಡುವ ಮೂಲಕ ಜನರನ್ನು ತೃಪ್ತಿಪಡಿಸುತ್ತಿದ್ದಾರೆ. **– ಮಂಧಾರ ಶ್ರೀನಿವಾಸ್**

# ಮಹಾಪ್ರಸಾದ ನಿತ್ಯ ನಿರಂತರ



ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಜಾತ್ರಾ ಮಹೋತ್ಸವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರತಿ ವರ್ಷದಂತೆ ಈ ಬಾರಿಯು ಫೆಬ್ರವರಿ 1 ರಿಂದ 6 ರವರೆಗೆ ನಡೆಯಲಿದೆ.

ಈ ವರ್ಷದ ಜಾತ್ರಾ ಮಹೋತ್ಸವಕ್ಕೆ ಅನ್ನ ದಾಸೋಹವು ವಿಜೃಂಭಣೆಯಿಂದ ಏರ್ಪಾಡಾಗುತ್ತಿದ್ದು, ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಮಹಾ ಪ್ರಸಾದವನ್ನು ಏರ್ಪಡಿಸಲಾಗಿದೆ. ಸುಮಾರು 600 ರಿಂದ 700 ಬಾಣಸಿಗರಿಂದ ಮಹಾ ಪ್ರಸಾದದ ಸಿದ್ಧತೆಯು ನಡೆಯುತ್ತಿದೆ. ಈ ಬಾರಿ 1000 ಕ್ವಿಂಟಾಲ್ ಅಕ್ಕಿ 10 ಟನ್ ಬೆಲ್ಲ, 1300 ಲೀಟರ್ ಅಡುಗೆ ಎಣ್ಣೆ, 13000 ಸಾವಿರ ಲೀಟರ್ ಹಾಲು, 32000 ಲೀಟರ್ ಮೊಸರು, 4500 ಗ್ರಾಂ ನಂದಿನಿ ತುಪ್ಪ, ಮೆಣಸಿನಪುಡಿ ಮತ್ತು ತೊಗರಿ ಬೇಳೆ ಮುಂತಾದವುಗಳಿಂದ ಪ್ರಸಾದದ ಸಿದ್ಧತೆಯು ನಡೆಯುತ್ತಿದೆ. ಈ ಬಾರಿ ಜಾತ್ರಾ ಮಹೋತ್ಸವದಲ್ಲಿ "ಮಾಲ್ದಿಗುಡಿ" ಎಂಬ ತುಮಕೂರು ಖ್ಯಾತಿಯ ವಿಶೇಷವಾದ ಸಿಹಿ ತಿಂಡಿಯನ್ನು ತಯಾರಿಸಲಾಗುತ್ತಿದೆ. ಮಹಾ ದಾಸೋಹಕ್ಕೆ ತೆಂಗಿನಕಾಯಿ, ತರಕಾರಿಗಳನ್ನು ಮಂಡ್ಯ, ಊಟಿ ಹಾಗೂ ಪಾಂಡವಪುರದಿಂದ ತರಿಸಲಾಗುತ್ತಿದೆ. ಇದರಂತೆಯೇ ಕ್ಯಾರೆಟ್, ಬೀಟ್‌ರೂಟ್, ಬೀನ್ಸ್ ಮತ್ತಿತರ ತರಕಾರಿಗಳನ್ನು ಕತ್ತರಿಸುವ ಮೆಷಿನ್‌ಗಳನ್ನು ಉಪಯೋಗಿಸಿಕೊಂಡು ಸುಮಾರು 1 ಗಂಟೆಗೆ 700 ರಿಂದ 800 ಕೆಜಿ ತರಕಾರಿಗಳನ್ನು ಒಂದೇ ಬಾರಿಗೆ ಕತ್ತರಿಸಲಾಗುತ್ತದೆ. ಹೀಗೆ ಜಾತ್ರೆಗೆ ಬರುವ ಭಕ್ತಾದಿಗಳಿಗೆ ಮಹಾಪ್ರಸಾದಕ್ಕಾಗಿ ಸಕಲ ಸಿದ್ಧತೆಯು ನಡೆಯುತ್ತಿದೆ. **–ಸುಮ ಪಿ ಮತ್ತು ಪುಣ್ಯ ಟಿ. ಬಿ**

# ರವಿವಾರದಂದು ರಸಪ್ರಶ್ನೆಯ ರಸಗವಳ...

**ಶರಣ ದರ್ಶನ ರಸಪ್ರಶ್ನೆ ಕಾರ್ಯಕ್ರಮವು ದಿನಾಂಕ 3.2.2019ರ ಭಾನುವಾರ ಸಂಜೆ 7 ಘಂಟೆಗೆ ಗದ್ದುಗೆ ಆವರಣದ ವೇದಿಕೆಯಲ್ಲಿ ನಡೆಯಲಿದೆ**

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕಳೆದ ಹದಿನೈದು ವರ್ಷಗಳಿಂದಲೂ ನಿರಂತರವಾಗಿ ರಸಪ್ರಶ್ನೆ ಕಾರ್ಯಕ್ರಮ ನಡೆಯುತ್ತಿದ್ದು, ಈ ಕಾರ್ಯಕ್ರಮ ಬಹಳ ಕುತೂಹಲಕಾರಿಯಾಗಿಯೂ, ಆಕರ್ಷಣೀಯವಾಗಿಯೂ ಮೂಡಿ ಬರುತ್ತಿದೆ. ಇದುವರೆವಿಗೂ ಶರಣ ದರ್ಶನ, ಸುತ್ತೂರು ದರ್ಶನ, ಕರ್ನಾಟಕ ದರ್ಶನ, ಭಾರತ ದರ್ಶನ, ಭಾರತೀಯ ಸಂಸ್ಕೃತಿ, ಶರಣ ತತ್ವ ದರ್ಶನ, ಅರವತ್ಮೂರು ಪುರಾತನರು, ಶಿವಶರಣೆಯರು, ದಾರ್ಶನಿಕರ ಚಿಂತನ ಹೀಗೆ ಹತ್ತು ಹಲವಾರು ವಿಷಯಗಳನ್ನು ಆಧರಿಸಿ ರಸ ಪ್ರಶ್ನೆ ಕಾರ್ಯಕ್ರಮಗಳು ನಡೆದಿವೆ. ಈ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಗುರುಕುಲದ ಸಾಧಕರು, ಜೆಎಸ್‌ಎಸ್ ಪದವಿ ಕಾಲೇಜು ಪ್ರಾಧ್ಯಾಪಕರು, ಜೆಎಸ್‌ಎಸ್ ಪಬ್ಲಿಕ್ ಶಾಲೆ ಶಿಕ್ಷಕರು, ಜೆಎಸ್‌ಎಸ್ ಪ್ರೌಢಶಾಲೆ ಶಿಕ್ಷಕರು, ಶಾಲಾ ಕಾಲೇಜು ಮಕ್ಕಳು, ಸಾರ್ವಜನಿಕರು, ಗೃಹಿಣಿಯರು ಹೀಗೆ ಒಂದೊಂದು ವರ್ಷ ಒಂದೊಂದು ವಿಭಾಗದಲ್ಲಿ ಸ್ಪರ್ಧೆ ನಡೆಸಲಾಗಿದೆ.


ರಸಪ್ರಶ್ನೆ ಕಾರ್ಯಕ್ರಮ ಸಾಮಾನ್ಯವಾಗಿ 5 ಸುತ್ತುಗಳಲ್ಲಿ ನಡೆಯುತ್ತದೆ. ಮೊದಲನೇ ಸುತ್ತು ವರ್ಗಾವಣೆ ಸುತ್ತು (Pass on Round) ಇಲ್ಲಿ ಉತ್ತರಿಸಲ್ಪಡದ ಪ್ರಶ್ನೆಗಳು ಮುಂದಿನ ತಂಡಗಳಿಗೆ ವರ್ಗಾವಣೆಯಾಗಿ ಉತ್ತರಿಸಿದ ತಂಡಕ್ಕೆ ಬೋನಸ್ ಅಂಕ ದೊರೆಯುತ್ತದೆ. 2 ಮತ್ತು 3ನೇ ಸುತ್ತು ಸಾಮಾನ್ಯವಾಗಿ ವಚನ ಅಥವಾ ದೇಶಭಕ್ತಿ ಗೀತೆ ಅಥವಾ ಭಾವ ಗೀತೆಯನ್ನು ಹೇಳುವ ಅಥವಾ ಹಾಡುವ ಸುತ್ತಾಗಿರುತ್ತದೆ. 4ನೇ ಸುತ್ತು ದೃಶ್ಯ ಸುತ್ತು (Pass on Round) ಇಲ್ಲಿ ವೇದಿಕೆಯ ಮೇಲಿರುವ ಪರದೆಯ ಮೇಲೆ ದೃಶ್ಯಗಳನ್ನು ತೋರಿಸಿ ಪ್ರಶ್ನಿಸಲಾಗುತ್ತದೆ. ಈ ಸುತ್ತು ನೋಡಲು ಆಕರ್ಷಣೀಯವಾಗಿದ್ದರೆ, 5ನೇ ಸುತ್ತು ತ್ವರಿತಗತಿಯ ಸುತ್ತು ಕೇಳಲು ಕುತೂಹಲಕಾರಿಯಾಗಿರುತ್ತದೆ. ಕೇವಲ ಒಂದು ನಿಮಿಷದ ಕಾಲಾವಧಿಯಲ್ಲಿ ಸತತವಾಗಿ ಕೇಳುವ 10 ಪ್ರಶ್ನೆಗಳಿಗೆ ಸ್ಪರ್ಧಿಗಳು ಉತ್ತರಿಸುವ ರೀತಿ ಮತ್ತು ಕ್ವಿಜ್ ಮಾಸ್ಟರ್ ಉತ್ತರಗಳನ್ನು ಸ್ವೀಕರಿಸುವ ರೀತಿ ಸಭಿಕರು ಉಸಿರು ಬಿಗಿ ಹಿಡಿದು ಕೂರುವಂತೆ ಮಾಡುತ್ತದೆ. ಸ್ಪರ್ಧೆಯು ಪಾರದರ್ಶಕವಾಗಿದ್ದು, ವೇದಿಕೆಯ ಮೇಲಿರುವ ಸ್ಕೋರ್ ಬೋರ್ಡ್ ಮೇಲೆ ಸಭಿಕರ ದೃಷ್ಟಿ ನೆಟ್ಟಿರುತ್ತದೆ. ಒಟ್ಟಾರೆ ಒಂದು ಘಂಟೆ ಕಾಲ ನಡೆಯುವ ಈ ರಸ ಪ್ರಶ್ನೆ ಕಾರ್ಯಕ್ರಮ ಸುತ್ತೂರು ಜಾತ್ರಾ ಮಹೋತ್ಸವದ ಒಂದು ಪುಟ್ಟ ಆಕರ್ಷಣೆ ಎನ್ನಬಹುದು.

ಈ ಬಾರಿ ನಡೆಯಲಿರುವ ರಸಪ್ರಶ್ನೆ ರಾಜ್ಯಮಟ್ಟದ್ದಾಗಿದ್ದು ಮುಖ್ಯವಾಗಿ ಮಹಿಳೆಯರಿಗಾಗಿ ನಡೆಯುತ್ತಿರುವುದು ವಿಶೇಷವಾಗಿದೆ. ರಾಜ್ಯದ ವಿವಿಧ ಜಿಲ್ಲೆ ಹಾಗೂ ತಾಲ್ಲೂಕು "ಕದಳಿ ಮಹಿಳಾ ವೇದಿಕೆ" ಗಳ ಸದಸ್ಯರಿಗೆ ಲಿಖಿತ ರಸಪ್ರಶ್ನೆ ಸ್ಪರ್ಧೆ ನಡೆಸಿ ಆ ಮೂಲಕ ಆಯ್ಕೆಯಾದ 6 ತಂಡಗಳಿಗೆ ಇಲ್ಲಿ ಅವಕಾಶ ಮಾಡಿಕೊಡಲಾಗಿದೆ. ಬಳ್ಳಾರಿ, ಧಾರವಾಡ, ಗದಗ, ಶಿವಮೊಗ್ಗ, ಬೇಲೂರು, ಕೊಳ್ಳೇಗಾಲ, ಈ ಆರು ತಂಡಗಳು ಹೆಚ್ಚು ಅಂಕಗಳಿಸಿ ಈ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದಾರೆ. ಇವರಿಗೆಲ್ಲಾ ಡಾ. ಗೊ. ರು. ಚನ್ನಬಸಪ್ಪ ಅವರು ಬರೆದಿರುವ ಶರಣ–ಕಿರಣ ಎಂಬ ಪ್ರಶ್ನೋತ್ತರ ರೂಪದ ಪುಸ್ತಕವನ್ನು ಪಠ್ಯಭಾಗವಾಗಿ ಒದಗಿಸಲಾಗಿತ್ತು.

ಈ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವವರು ಮೈಸೂರಿನ ಕ್ವಿಜ್ ಮಾಸ್ಟರ್ (ರಸ ಪ್ರಶ್ನೆ ನಿರ್ವಾಹಕರು) ಶ್ರೀಮತಿ ರಾಧಾ ನೀಲಕಂಠ ಇವರ ಅಚ್ಚುಕಟ್ಟಾದ ನಿರ್ವಹಣೆ, ಮಾತುಗಾರಿಕೆ ಮತ್ತು ಖಡಕ್ ನಿರ್ಧಾರಗಳು ಈ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡುತ್ತವೆ. ಇವರಿಗೆ ಅಂಕಕಾರರಾಗಿ ಸಹಕರಿಸುವವರು. ಶ್ರೀಮತಿ ಸವಿತಾ ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀಮತಿ ಉಷಾ ಪಂಡಿತ್‌ರವರು ದೃಶ್ಯ ಸಂಯೋಜಕರು ಶ್ರೀ ನಿಜಲಿಂಗಪ್ಪ ಅವರು ಸಂಚಾಲಕರು ಶ್ರೀ ಎಸ್. ನಂದೀಶ್ ಹಾಗೂ ಶ್ರೀ ಹೊನ್ನಶೆಟ್ಟಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ.

**ಛಾಯಾ ಚಿತ್ರಗಳು**

**ವಾಟಾಳ್ ಆನಂದ್**
**ಬಿ.ಎನ್. ನಿಜಲಿಂಗಪ್ಪ**
**ಜಯಶಂಕರ್**
**ಮಂಜುನಾಥ್**
**ಶಶಾಂಕ್**
**ನಂಜುಂಡನಾಯ್ಕ**




Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015